# ಝಾನ್ಸಿ ರಾಣಿ ಕಂಗನಾ



ಬಾಲಿವುಡ್‌ಗೆ ಐತಿಹಾಸಿಕ ಚಿತ್ರಗಳ ಮೋಹ ಹೆಚ್ಚಾದಂತಿದೆ. 'ಪದ್ಮಾವತ್' ಚಿತ್ರ ಬಿಡುಗಡೆಯಾಗಿ ವಿವಾದದ ಬೆಂಕಿ ಹೊತ್ತಿಸಿದ್ದರೂ ಬಾಲಿವುಡ್ ನಿರ್ಮಾಪಕರು– ನಿರ್ದೇಶಕರು ಇತಿಹಾಸದ ಬೆನ್ನು ಹತ್ತುವುದನ್ನು ಬಿಡುವುದಿಲ್ಲ ಎನ್ನುವುದು ಖಚಿತ. ಇದೀಗ ಕಂಗನಾ ರನೌತ್ ಅಭಿನಯದ 'ಮಣಿಕರ್ಣಿಕಾ: ದಿ ಕ್ವೀನ್ ಆಫ್ ಝಾನ್ಸಿ' ಎನ್ನುವ ಸಿನಿಮಾದ ಸುತ್ತ ಎಲ್ಲರ ಗಮನ ಹರಿದಿದೆ. ಚಿತ್ರದ ಶೂಟಿಂಗ್ ಜೈಪುರದ ಜೈಗಢ್ ಕೋಟೆಯಲ್ಲಿ ನಡೆದಿದ್ದು ಕಂಗನಾ, ಝಾನ್ಸಿ ರಾಣಿಯ ಉಡುಪಿನಲ್ಲಿ ವಿಜೃಂಭಿಸುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಚಿನ್ನದ ಹೊಳಪಿನ ಕಂದು ಸೀರೆಯಲ್ಲಿ ವೀರಾವೇಶದ ಪೋಸ್ ನೀಡಿರುವ ಕಂಗನಾ ಈ ಚಿತ್ರಕ್ಕಾಗಿ ತಲೆಯ ಮೇಲೆ ನೀರು ಸುರಿಸಿಕೊಂಡು ಧಾರ್ಮಿಕ ಸ್ನಾನ ಮಾಡುವ ದೃಶ್ಯವೂ ವೀಕ್ಷಕರ ಗಮನ ಸೆಳೆದಿದೆ. 'ಪದ್ಮಾವತ್' ತರಹ ಈ ಚಿತ್ರಕ್ಕೆ ಯಾರೂ ಪ್ರತಿಭಟನೆಯ ಸೊಲ್ಲು ಎತ್ತಲಿಕ್ಕಿಲ್ಲ ಎನ್ನುವುದು ನಿರ್ಮಾಪಕರ ವಿಶ್ವಾಸ. ಬಲ್ಲ ಮೂಲಗಳ ಪ್ರಕಾರ, ಈ ಚಿತ್ರ ಏಪ್ರಿಲ್‌ನಲ್ಲಿ ತೆರೆ ಕಾಣಲಿದೆ.

ಝಾನ್ಸಿ ರಾಣಿಯ ಕುರಿತು ಇನ್ನೂ ಒಂದು ಚಿತ್ರ ಈಗಾಗಲೆ ಶೂಟಿಂಗ್ ಮುಗಿಸಿದೆ ಎನ್ನುವುದು ವಿಶೇಷ. ಇಂಡೊ–ಬ್ರಿಟಿಷ್ ನಿರ್ಮಾಣದ ಈ ಚಿತ್ರದ ಹೆಸರು ಸ್ವೋರ್ಡ್ಸ್ ಆ್ಯಂಡ್ ಸೆಪ್‌ಟ್ರೆಸ್. ಈ ಚಿತ್ರದ ಶೂಟಿಂಗ್ ಮುಗಿದಿದ್ದು ವಿಎಫ್‌ಎಕ್ಸ್ ಕೆಲಸ ಭರದಿಂದ ನಡೆದಿದೆ. ಅದ್ಭುತ ರಮ್ಯ ಯುದ್ಧದ ದೃಶ್ಯಗಳಿಗಾಗಿ ಚಿತ್ರದ ನಿರ್ಮಾಪಕರು ಧಾರಾಳವಾಗಿ ಖರ್ಚು ಮಾಡಿದ್ದಾರಂತೆ. ದೇವಿಕಾ ಭಿಸೆ ಈ ಚಿತ್ರದಲ್ಲಿ ಝಾನ್ಸಿ ರಾಣಿಯ ಪಾತ್ರ ಮಾಡಿದ್ದು ಸ್ವಾತಿ ಭಿಸೆ ನಿರ್ದೇಶಕಿ. ಚಿತ್ರದಲ್ಲಿ ಹಾಲಿವುಡ್‌ನ ಖ್ಯಾತ ನಟರಾದ ರೈಪರ್ಟ್ ಎವರೆಟ್ ಮತ್ತು ಡೆರೆಕ್ ಜಾಕೊಬಿ ಕೂಡಾ ನಟಿಸಿದ್ದಾರೆ. ತಾಂತ್ರಿಕ ಕೆಲಸ ಬೇಗ ಮುಗಿದರೆ ಈ ಚಿತ್ರ ಮಾರ್ಚ್‌ನಲ್ಲೇ ತೆರೆ ಕಾಣಲಿದೆಯಂತೆ.





# ಸಾನಿಯಾಳತ್ತ ರೋಹಿತ್ ಚಿತ್ತ

ಈ ಮಧ್ಯೆ ಬಾಲಿವುಡ್ ಆ್ಯಕ್ಷನ್ ಚಿತ್ರಗಳ ನಿರ್ದೇಶಕ ರೋಹಿತ್ ಶೆಟ್ಟಿ ಕೂಡಾ ಸಾನಿಯಾ ಮಿರ್ಜಾ ಜೀವನ ಆಧರಿಸಿ ಸಿನಿಮಾವೊಂದನ್ನು ಮಾಡಲು ಸಿದ್ಧರಾಗಿದ್ದಾರೆ. ಮಿಲ್ಖಾ ಸಿಂಗ್, ಮೇರಿ ಕೋಮ್, ಸಚಿನ್ ತೆಂಡೂಲ್ಕರ್, ಧೋನಿ ಮುಂತಾದವರ ಜೀವನ ಆಧಾರಿತ ಚಿತ್ರಗಳು ಬಾಲಿವುಡ್‌ನಲ್ಲಿ ಬಿಡುಗಡೆಯಾಗಿ ಸಾಕಷ್ಟು ಮೆಚ್ಚುಗೆ ಗಳಿಸಿದ್ದು ಹಳೆಯ ಕಥೆ. ಈಗ ರೋಹಿತ್ ಶೆಟ್ಟಿ ಸರದಿ. ಸಾನಿಯಾ ಟೆನಿಸ್‌ನಲ್ಲಿ ವಿಶ್ವ ಚಾಂಪಿಯನ್ ಆದದ್ದು ಹಾಗೂ ಪಾಕಿಸ್ತಾನದ ಕ್ರಿಕೆಟಿಗನನ್ನು ಮದುವೆಯಾದದ್ದು ಆ್ಯಕ್ಷನ್ ಸಿನಿಮಾಗೂ ಸರಕಾಗಬಹುದು ಎಂದು ರೋಹಿತ್ ಶೆಟ್ಟಿ ಯೋಚಿಸಿದಂತಿದೆ.

ಈ ಹಿಂದೆ ಪರಿಣೀತಿ ಚೋಪ್ರಾಳನ್ನು ಹಾಕಿಕೊಂಡು ಸಾನಿಯಾ ಕುರಿತ ಚಿತ್ರವನ್ನು ಫರ್ಹಾ ಖಾನ್ ನಿರ್ದೇಶಿಸುವ ಸುದ್ದಿ ಬಂದಿತ್ತು. ಆದರೆ ಆ ಯೋಜನೆ ಏಕೋ ಬಿದ್ದುಹೋಯಿತು. ನಿರ್ದೇಶಕ ಕರಣ್ ಜೋಹರ್ ಕೂಡಾ ಸಾನಿಯಾ ಕುರಿತ ಚಿತ್ರಕ್ಕೆ ಆಸಕ್ತಿ ವ್ಯಕ್ತಪಡಿಸಿದ್ದಾರೆ.

■ ಬಿಂದು